**CW : 4**

PW : 3

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ.

# CC No.224/2019

| | | |
|---|---|---|
| ಸಾಕ್ಷಿದಾರರ ಹೆಸರು | : | ರಂಜಿತ್ |
| ತಂದೆಯ ಹೆಸರು | : | ಕೇಶವ ಬಲ್ಯಾಯ |
| ಪ್ರಾಯ | : | 31 ವರ್ಷ |
| ಉದ್ಯೋಗ | | ಮೆಕ್ಯಾನಿಕ್ |
| ವಾಸಸ್ಥಳ | : | ಆರ್ಲ ಪದವು |

ದಿನಾಂಕ:**17.06.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:

ನನ್ನ ವರ್ಕ್ ಶಾಪ್ ಆರ್ಲ ಪದವಿನಲ್ಲಿ ಇರುತ್ತದೆ. ಕಂಚಲು ಕುಂಜ ಕಾಂಪ್ಲೆಕ್ಸ್ ನಲ್ಲಿ ವರ್ಕ್ ಶಾಪ್ ಇರುತ್ತದೆ. ಅಬ್ದುಲ್ ಕರೀಂ ಎನ್ನುವವರ ಪರಿಚಯ ನನಗೆ ಇಲ್ಲ. ಅವರು ಏನು ವ್ಯವಹಾರ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ. ಅವರ ಅಂಗಡಿಯಲ್ಲಿ ಕಳ್ಳತನವಾಗಿದ್ದ ಬಗ್ಗೆ ನನಗೆ ಗೊತ್ತಿಲ್ಲ. ಆರೋಪಿತರ ಪರಿಚಯವಿಲ್ಲ. ಪೋಲೀಸರು ನನ್ನನ್ನು ವಿಚಾರಣೆ ಮಾಡಿಲ್ಲ. ನಾನು ಯಾವುದೇ ಹೇಳಿಕೆ ಅಥವಾ ಮರುಹೇಳಿಕೆ ಕೊಟ್ಟಿಲ್ಲ.

ನಿಪಿ2 ಮತ್ತು 3 ದಾಖಲೆಗಳನ್ನು ಸಾಕ್ಷಿಗೆ ತೋರಿಸಲಾಗಿ ಅದರಲ್ಲಿ ಇರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು, ನಿಪಿ2 ಮತ್ತು 3 ರಲ್ಲಿರುವ ಸಾಕ್ಷಿಯ

ಸಹಿಗಳನ್ನು ನಿಪಿ2(ಬಿ) ಹಾಗೂ ನಿಪಿ3(ಬಿ) ಎಂದು ಗುರುತಿಸಲಾಯಿತು. ನಿಪಿ2 ಮತ್ತು 3 ಕ್ಕೆ ಯಾವಾಗ ಸಹಿ ಮಾಡಿದ್ದೇನು ಎಂದು ಗೊತ್ತಿಲ್ಲ. ಆದರೆ ಅವುಗಳಿಗೆ ಸಹಿಗಳನ್ನು ಪುತ್ತೂರು ಗ್ರಾಮಾಂತರ ಪೋಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ.

ನಿಪಿ6 ಭಾವಚಿತ್ರಗಳಲ್ಲಿ ನಾವು ಮತ್ತು ಹಜೀಜ್ ಎನ್ನುವವರು ಕಾಣುತ್ತೇವೆ. (ಈ ಹಂತದಲ್ಲಿ ಮಾನ್ಯ ಸ.ಸ. ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಗಿದೆ.)

<u>ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>

ನನ್ನ ವರ್ ಶಾಪ್ ಇರುವ ಕಟ್ಟಡದಲ್ಲಿ ಕರೀಂ ಎನ್ನುವವರು ಕರಿಮೆಣಸು ಮತ್ತು ಅಡಿಕೆ ವ್ಯಾಪಾರ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅವರು ಘಟನೆ ನಡೆಯುವ ಮುಂಚೆ 5 ಕ್ವಿಂಟಲ್ ಕಾಳುಮೆಣಸನ್ನು ಸ್ಥಳೀಯರಿಂದ ಖರೀದಿ ಮಾಡಿ ಶೇಖರಿಸಿ ಇಟ್ಟಿದ್ದು, ದಿಃ24.09.2017 ರಂದು ಸಕಲೇಶಪುರದಿಂದ ಗಿರಾಕಿಂಯೊಬ್ಬರಿಂದ 9 ಕ್ವಿಂಟಾಲ್ ಕಾಳು ಮೆಣಸನ್ನು ಖರೀದಿ ಮಾಡಿ ವಾಹನದಲ್ಲಿ ಲೋಡ್ ಮಾಡಿಕೊಂಡು ಬಂದು ಅದೇ ದಿನ ರಾತ್ರಿ 11.00 ಗಂಟೆಗೆ ಅವರ ಅಂಗಡಿಯೊಳಗೆ ಗೋಣಿ ಚೀಲಗಳಲ್ಲಿ ತುಂಬಿ ಶೇಖರಿಸಿಟ್ಟು ಮನೆಗೆ ಹೋಗಿದ್ದು, ದಿಃ25.09.2017 ರಂದು ಬೆಳಿಗ್ಗೆ 7.30 ಗಂಟೆಗೆ ಚಾಸಾ1 ರವರಿಗೆ ಫಾರೂಕ್ ಎನ್ನುವವರು ಕರೆ ಮಾಡಿ ಅಂಗಡಿಯ ಶೆಟರ್ ನ ಒಂದು ಭಾಗ ತೆರೆದಿರುವುದಾಗಿ ತಿಳಿಸಿದ್ದು ಆಗ ಚಾಸಾ1 ಮತ್ತು ಚಾಸಾ2 ರವರು ಅಂಗಡಿಯೊಳಗೆ ಹೋಗಿ ನೋಡಿದಾಗ ಅವರ ಅಂಗಡಿಯೊಳಗಿದ್ದ 20 ಚೀಲ ಕಾಳು ಮೆಣಸು ಅದರ ಅಂದಾಜು 990 ಕೆ.ಜಿ. ಕಾಳುಮೆಣಸನ್ನು ಯಾರೋ ಕಳ್ಳತನ ಮಾಡಿಕೊಂಡು ಹೋಗಿರುವ ವಿಚಾರ ನನಗೆ ತಿಳಿದಿರುತ್ತದೆ ಎಂದರೆ ಸರಿಯಲ್ಲ. ಈ ಬಗ್ಗೆ ಚಾಸಾ1 ರವರು

ಪುತ್ತೂರು ಗ್ರಾಮಾಂತರ ಠಾಣೆಗೆ ಹೋಗಿ ದೂರನ್ನು ನೀಡಿರುತ್ತಾರೆ ಎನ್ನುವ ವಿಚಾರ ನನಗೆ ಗೊತ್ತಿಲ್ಲ.

ದಿಃ13.10.2017 ರಂದು ಮತ್ತು ದಿಃ01.11.2017 ರಂದು ಈ ಪ್ರಕರಣದಲ್ಲಿ ದಸ್ತಗಿರಿಯಾದ 1 ರಿಂದ 6ನೇ ಆರೋಪಿತರನ್ನು ನನಗೆ ಪೋಲೀಸ್ ಠಾಣೆಯಲ್ಲಿ ತೋರಿಸಿದ್ದು, ನಾನು ಅವರನ್ನು ನೋಡಿ ಗುರುತಿಸಿದ್ದೇನೆ ಎಂದರೆ ಸರಿಯಲ್ಲ. ಅಲ್ಲದೇ 7 ಮತ್ತು 8 ನೇ ಆರೋಪಿತರನ್ನೂ ಕೂಡಾ ಠಾಣೆಯಲ್ಲಿ ನನಗೆ ತೋರಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಗಳು ಕೃತ್ಯಕ್ಕೆ ಬಳಸಿದ ಇನ್ನೋವಾ ಕಾರು, ಬೋಲೆರೋ ಜೀಪು, ಈಚರ್ ಲಾರಿಯನ್ನು ನಾನು ಠಾಣೆಯಲ್ಲಿ ನೋಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗಳ ವಶದಿಂದ ಪೋಲೀಸರು 851 ಕೆ.ಜಿ. ಕರಿಮೆಣಸನ್ನು ಸ್ವಾಧೀನಪಡಿಸಿಕೊಂಡಿರುವ ವಿಚಾರ ಹಾಗೂ 8 ನೇ ಆರೋಪಿಯು ಉಳಿದ 139 ಕೆ.ಜಿ. ಕಾಳುಮೆಣಸನ್ನು ಗುರುತುಪರಿಚಯವಿಲ್ಲದವರಿಗೆ ಮಾರಾಟ ಮಾಡಿರುವ ವಿಚಾರ ನನಗೆ ಗೊತ್ತಿರುತ್ತದೆ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ದಿಃ26.09.2017 ರಂದು ನನಗೆ ಈಗ ಓದಿ ಹೇಳಿದ ರೀತಿ" ನಾನು ಈ ಮೇಲಿನ ವಿಳಾಸದಲ್ಲಿ__________________ಮಹಜರಿಗೆ ನಾನು ಸಹಿ ಹಾಕಿರುತ್ತೇನೆ " ಎಂದು ಹೇಳಿಕೆಯನ್ನು ನೀಡಿದ್ದೆನು ಎಂದರೆ ಸರಿಯಲ್ಲ. ಸಾಕ್ಷಿ ನಿರಾಕರಿಸಿದ ಹೇಳಿಕೆಯನ್ನು ನಿಪಿ-11 ಎಂದು ಗುರುತಿಸಲಾಯಿತು.

ದಿಃ05.01.2018 ರಂದು ನನಗೆ ಈಗ ಓದಿ ಹೇಳಿದ ರೀತಿ "ದಿಃ 25.09.2017 ರಂದು ಪಣಾಜೆ ಗ್ರಾಮಾದ __________ ಆರೋಪಿಗಳನ್ನು ಮತ್ತು ಸೊತ್ತನ್ನು ನೋಡಿದ್ದು, ಮುಂದಕ್ಕೆ ನೋಡಿದರೆ ಗುರುತಿಸಬಲ್ಲೆ" ಎಂದು ಮರುಹೇಳಿಕೆಯನ್ನು

ಪೋಲೀಸರಿಗೆ ನೀಡಿದ್ದೆನು ಎಂದರೆ ಸರಿಯಲ್ಲ. ಸಾಕ್ಷಿಯು ನಿರಾಕರಿಸಿದ ಮರುಹೇಳಿಕೆಯನ್ನು ನಿಪಿ12 ಎಂದು ಗುರುತಿಸಲಾಯಿತು.

ದಿ:26.09.2017 ರಂದು ಪುತ್ತೂರು ತಾಲೂಕು ಪಾಣಾಜೆ ಗ್ರಾಮದ ಆರ್ಲಪದವು ಎಂಬಲ್ಲಿ ಚಾಸಾ3 ರವರಿಗೆ ಸೇರಿದ ಕೊಠಡಿ ಸಂಖ್ಯೆ 1 ರಲ್ಲಿ ಪೋಲೀಸರು ಸ್ಥಳ ಮಹಜರು ಮಾಡಲು ಬಂದಾಗ ಚಾಸಾ-1 ರವರು ಘಟನಾ ಸ್ಥಳಗಳನ್ನು ತೋರಿಸಿಕೊಟ್ಟಾಗ ಪೋಲೀಸರು ನನ್ನ ಹಾಗೂ ಚಾಸಾ5 ರವರ ಸಮಕ್ಷಮ ಬೆಳಿಗ್ಗೆ 8 ರಿಂದ 9 ಗಂಟೆಯ ಸಮಯದಲ್ಲಿ ನಿಪಿ2 ರಂತೆ ಮಹಜರು, ನಿಪಿ3 ರಂತೆ ನಕಾಶೆಯನ್ನು ತಯಾರಿಸಿ ಸ್ಥಳದಲ್ಲಿ ನನ್ನ ಸಹಿಗಳನ್ನು ಪಡೆದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಪೋಲೀಸರು ನಿಪಿ6 ಭಾವಚಿತ್ರವನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

ಆರೋಪಿತರು ನನ್ನ ಪರಿಚಯಸ್ಥರಾದ ಕಾರಣ ಆರೋಪಿತರನ್ನು ಶಿಕ್ಷೆಯಿಂದ ತಪ್ಪಿಸುವ ಉದ್ದೇಶದಿಂದ ಘಟನೆಯ ಸಲುವಾಗಿ ಹಾಗೂ ಮಹಜರಿನ ಸಂಬಂಧಿತವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು: ಆರೋಪಿ ಪರ ಶ್ರೀ ಎ. ಕೆ. ಎ. ವಕೀಲರಿಂದ:</u>

ನಾನು ನಿಪಿ2 ಮತ್ತು 3 ದಾಖಲೆಗಳಿಗೆ ಸಹಿ ಮಾಡಿದ ಪೋಲೀಸ್ ಠಾಣೆಯ ಆವರಣದಲ್ಲಿ ನಿಪಿ6 ಭಾವಚಿತ್ರವನ್ನು ಪೋಲೀಸರು ತೆಗೆದಿದ್ದಾರೆ ಎಂದರೆ ಸರಿ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

**CW : 4**

PW : 3

ಓ.ಹೇ.ಕೇ.ಸರಿ.ಇದೆ.

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ಪುತ್ತೂರು, ದ.ಕ.